ಬೆಂಗಳೂರು ನಗರ ವಿಶ್ವವಿದ್ಯಾನಿಲಯ
BENGALURU CITY UNIVERSITY
ಸೆಂಟ್ರಲ್ ಕಾಲೇಜು ಆವರಣ, ಡಾ. ಬಿ.ಆರ್. ಅಂಬೇಡ್ಕರ್ ವೀಧಿ, ಬೆಂಗಳೂರು– 560 001.
Ph.No.080-22961016 / 22131385 E-Mail ID: registrarbcu@gmail.com

ಸಂಖ್ಯೆ: ಬೆ.ನ.ವಿ./ಕು.ಸ./ಸಂಯೋಜನಾ/2022-23

ದಿನಾಂಕ: 20.10.2022

## ಅಧಿಸೂಚನೆ

ವಿಷಯ : 2022-23ನೇ ಶೈಕ್ಷಣಿಕ ಸಾಲಿಗೆ Vijaya Teacher's College, 11th Main, 4th Block, Jayanagar, Bengaluru – 11. ಇವರಿಗೆ ಶಾಶ್ವತ ಸಂಯೋಜನೆ ವಿಸ್ತರಣೆ ಬಗ್ಗೆ.

ಉಲ್ಲೇಖ : 1. ಸರ್ಕಾರಿ ಆದೇಶ ಸಂಖ್ಯೆ: ಇಡಿ34ಇಟಿಎವಿ2020(ಭಾಗ-2) ದಿನಾಂಕ:26.04.2022
2. ಸರ್ಕಾರಿ ಆದೇಶ ಸಂಖ್ಯೆ: ಇಡಿ 417 ಯುಟಿವಿ 2022 ದಿನಾಂಕ:20.09.2022
3. ಸಿಂಡಿಕೇಟ್/ವಿದ್ಯಾವಿಷಯಕ ಪರಿಷತ್ ಸಭೆಯ ಅನುಮೋದನೆ ದಿನಾಂಕ: 28.06.2022

• • •

ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ 2000ದ 59ನೇ ಪ್ರಕರಣದ 17ನೇ ಉಪಬಂಧದಲ್ಲಿ ಪ್ರದತ್ತವಾದ ಅಧಿಕಾರದನ್ವಯ ಬೆಂಗಳೂರು ನಗರ ವಿಶ್ವವಿದ್ಯಾನಿಲಯವು, 2022-23ನೇ ಸಾಲಿಗೆ ಬೆಂಗಳೂರಿನ Vijaya Teacher's College, 11th Main, 4th Block, Jayanagar, Bengaluru – 11. ನಡೆಸುತ್ತಿರುವ ಕೆಳಕಂಡ ಕೋರ್ಸಿಗೆ/ಕೋರ್ಸುಗಳಿಗೆ ಈ ಕೆಳಕಂಡ ಷರತ್ತಿಗೊಳಪಟ್ಟು ಶಾಶ್ವತ ಸಂಯೋಜನೆಯನ್ನು 5 ವರ್ಷಗಳ ಅವಧಿಯವರೆಗೆ ಸಂಯೋಜನೆಯನ್ನು ನವೀಕರಿಸಿ ಮುಂದುವರಿಸಿದೆ.

| ಕೋರ್ಸು | ವಿಷಯ | ವಿದ್ಯಾರ್ಥಿ ಪ್ರಮಾಣ |
|---|---|---|
| Extension of Permanent Affiliation | | |
| B.Ed. | As per University regulations | 100 (ನೂರು) |

• ಸದರಿ ಕಾಲೇಜು 2022-23ನೇ ಸಾಲಿನಿಂದ 2026-27ನೇ ಸಾಲಿನವರೆಗೆ ಐದು ವರ್ಷಗಳ ಶಾಶ್ವತ ಸಂಯೋಜನೆಯನ್ನು ಹೊಂದಿರುತ್ತದೆ.

**ಷರತ್ತುಗಳು:**

6 ತಿಂಗಳುಗಳ ಒಳಗಾಗಿ ಕಟ್ಟಡದ ಸುರಕ್ಷತೆ / ಕುರಿತು ಲೋಕೋಪಯೋಗಿ ಇಲಾಖೆಯಿಂದ ಅಗ್ನಿ ಸುರಕ್ಷತೆಯ ಕುರಿತು ಕರ್ನಾಟಕ ಅಗ್ನಿ ಮತ್ತು ತುರ್ತು ಸೇವೆಗಳ ಇಲಾಖೆಯಿಂದ ಪ್ರಮಾಣ ಪತ್ರವನ್ನು ಪಡೆದು ವಿಶ್ವವಿದ್ಯಾಲಯಕ್ಕೆ ಸಲ್ಲಿಸತಕ್ಕದ್ದು. NCTE ಅನುಮತಿ ಪಡೆಯತಕ್ಕದ್ದು. NET/SLET ಅರ್ಹತೆಯುಳ್ಳ ಬೋಧಕರನ್ನು ಹೆಚ್ಚುವರಿಯಾಗಿ ನೇಮಿಸಿಕೊಳ್ಳತಕ್ಕದ್ದು. ತಪ್ಪಿದಲ್ಲಿ, ಸಂಯೋಜನ ನವೀಕರಣ ಮಂಜುರಾತಿಗೆ ಈ ಪತ್ರದನ್ವಯ ಮಾಡಲಾದ ಶಿಫಾರಸ್ಸು ಸ್ವಯಂ ಚಾಲಿತವಾಗಿ ರದ್ದಾಗುತ್ತದೆ.

ಶಾಶ್ವತ ಸಂಯೋಜನೆ ಮಂಜೂರಾತಿ ಹಾಗೂ ನವೀಕರಣಕ್ಕೆ ಅಗತ್ಯವಾಗುವ ಈ ಕೆಳಕಂಡ ಷರತ್ತುಗಳನ್ನು ಪೂರೈಸತಕ್ಕದ್ದು।

1. ನ್ಯಾಕ್ ಮಾನ್ಯತೆಯ ಅವಧಿಯು ದಿನಾಂಕ:04.01.2018 ರಂದು ಮುಕ್ತಾಯಗೊಂಡಿದ್ದು, ನ್ಯಾಕ್ ಮಾನ್ಯತೆಯನ್ನು ಇದೇ ಶೈಕ್ಷಣಿಕ ವರ್ಷದಲ್ಲಿ ಪುನರ್ ಪಡೆಯತಕ್ಕದ್ದು.
2. ಸಮಗ್ರ ಶೈಕ್ಷಣಿಕ ಹಾಗೂ ಭೌತಿಕ ಮೂಲ ಸೌಕರ್ಯಗಳನ್ನು ಕಲ್ಪಿಸತಕ್ಕದ್ದು.
3. ಖಾಯಂ ಬೋಧಕ ಸಿಬ್ಬಂದಿಗೆ ಯುಜಿಸಿ ವೇತನ ಶ್ರೇಣಿಯಲ್ಲಿ ಹಾಗೂ ಬೋಧಕೇತರ ಸಿಬ್ಬಂದಿಗೆ ರಾಜ್ಯ ವೇತನ ಶ್ರೇಣಿಯಲ್ಲಿ ವೇತನ ಪಾವತಿಸತಕ್ಕದ್ದು.



Scanned with ACE Scanner

4. ಕಾಲೇಜು ಕೌನ್ಸಿಲ್ ಅನ್ನು ಸ್ಥಾಪಿಸಲಾಗದಿದ್ದಲ್ಲಿ, ಕೂಡಲೇ ಸ್ಥಾಪಿಸಿ ನಿಯತಕಾಲಿಕವಾಗಿ ಸಭೆಗಳನ್ನು ನಡೆಸತಕ್ಕದ್ದು.

ಸ್ಥಳೀಯ ವಿಚಾರಣಾ ಸಮಿತಿಯ ಹಾಗೂ ಈ ಪತ್ರದಲ್ಲಿನ ಷರತ್ತುಗಳನ್ನು ಕಾಲೇಜು ಪರಿಪಾಲಿಸುವುದನ್ನು ವಿಶ್ವವಿದ್ಯಾಲಯವು ಖಚಿತ ಪಡಿಸಿಕೊಳ್ಳತಕ್ಕದ್ದು. ತಪ್ಪಿದಲ್ಲಿ 2023-24ನೇ ಶಾಲಿನ ಸಾಲಿನಿಂದ ಸಂಯೋಜನೆಯನ್ನು ರದ್ದುಪಡಿಸಲು ಬೆಂಗಳೂರು ನಗರ ವಿಶ್ವವಿದ್ಯಾನಿಲಯಕ್ಕೆ ಸೂಚಿಸಲಾಗಿದೆ.

1. ವಿದ್ಯಾರ್ಥಿಗಳ ಪ್ರವೇಶವನ್ನು ಕಾಲಕಾಲಕ್ಕೆ ತಿದ್ದುಪಡಿಯಾದ ಕರ್ನಾಟಕ ಬಿ.ಎಡ್. ಕೋರ್ಸ್‌ಗಳ ಅಭ್ಯರ್ಥಿಗಳ ಆಯ್ಕೆ ನಿಯಮಗಳನ್ವಯ ಕಟ್ಟುನಿಟ್ಟಾಗಿ ಪಡೆಯತಕ್ಕದ್ದು.
2. ಕರ್ನಾಟಕ ಬಿ.ಎಡ್. ಕೋರ್ಸುಗಳಿಗೆ ಅಭ್ಯರ್ಥಿಗಳ ಆಯ್ಕೆ ನಿಯಮಗಳು 1999ರ 2(1) ನೇ ನಿಯಮದಡಿಯಲ್ಲಿ ನಿರ್ಧರಿಸಲಾಗಿರುವ ವಿದ್ಯಾರ್ಥಿ ಪ್ರಮಾಣಕ್ಕೆ ಅನುಗುಣವಾಗಿ ಮತ್ತು ಪೂರಕವಾಗಿ ವಿಧಿಸಲಾಗಿರುವ ಷರತ್ತುಗಳಿಗೊಳಪಟ್ಟು ವಿದ್ಯಾರ್ಥಿಗಳ ಪ್ರವೇಶ ಪಡೆಯತಕ್ಕದ್ದು.
3. ಕಾಲೇಜುಗಳು ಎನ್.ಸಿ.ಟಿ.ಇ ಅಧಿನಿಯಮ 1993ರ 14ನೇ ಪ್ರಕರಣದಡಿ ಮಾನ್ಯತೆಯನ್ನು ಹೊಂದಿರತಕ್ಕದ್ದು.
4. ಕಾಲೇಜುಗಳು ಎನ್.ಸಿ.ಟಿ.ಇ ಜಾರಿಗೊಳಿಸಿರುವ ನೋಟೀಸ್‌ನಲ್ಲಿ ನಿರ್ದಿಷ್ಟಪಡಿಸಲಾಗಿರುವ ಷರತ್ತುಗಳನ್ನು ಕಟ್ಟುನಿಟ್ಟಾಗಿ ಪೂರೈಸತಕ್ಕದ್ದು. ಎನ್.ಸಿ.ಟಿ.ಇ ಮಾನ್ಯತೆ ಹೊಂದದ ಹೊರತು ಕಾಲೇಜು ವಿದ್ಯಾರ್ಥಿಗಳ ಪ್ರವೇಶ ಪಡೆಯತಕ್ಕದ್ದಲ್ಲ.
5. ಕಾಲೇಜುಗಳ ಹೆಸರು, ಕಟ್ಟಡ, ಸ್ಥಳ ಬದಲಾವಣೆಗೆ ಎನ್.ಸಿ.ಟಿ.ಇ ಸರ್ಕಾರ ಮತ್ತು ವಿಶ್ವವಿದ್ಯಾಲಯದ ಅನುಮತಿಯನ್ನು ಕಡ್ಡಾಯವಾಗಿ ಪಡೆಯತಕ್ಕದ್ದು.
6. ಕಾಲೇಜಿಗೆ ಅನ್ವಯವಾಗುವ ಅನುದಾನ ಸಂಹಿತೆಯಲ್ಲಿ ಯಾವುದೇ ಉಪಬಂಧಗಳಿದ್ದರೂ ಕಾಲೇಜಿನ ಮೇಲ್ಕಂಡ ಕೋರ್ಸ್‌ಗೆ ಸರ್ಕಾರವು ಯಾವುದೇ ಅನುದಾನವನ್ನು ಮಂಜೂರು ಮಾಡುವುದಿಲ್ಲ. ಅದನ್ನು ಶಾಶ್ವತ ಅನುದಾನ ರಹಿತ ಕೋರ್ಸೆಂದು ಪರಿಗಣಿಸತಕ್ಕದ್ದು.
7. ಮೇಲ್ಕಂಡ ಕಾಲೇಜು ವಿಶ್ವವಿದ್ಯಾಲಯದ ನಿಯಮಾವಳಿಗಳ ಉಪಬಂಧಗಳನ್ನು ತಪ್ಪದೇ ಪಾಲಿಸತಕ್ಕದ್ದು.
8. ಜಾರಿಯಲ್ಲಿರುವ ಸರ್ಕಾರದ ನಿಯಮಾವಳಿ ಆದೇಶಗಳು ಹಾಗು ಅನುಶಾಸನ, ಪರಿನಿಯಮಾವಳಿ ಇತ್ಯಾದಿಗಳನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು.
9. ಪ್ರವೇಶಾತಿಯಲ್ಲಿ ರೋಸ್ಟರ್ ಪದ್ಧತಿಯನ್ನು ಕಟ್ಟುನಿಟ್ಟಾಗಿ ಪಾಲಿಸತಕ್ಕದ್ದು.
10. ನಿರ್ದಿಷ್ಟ ವಿನಾಯಿತಿ ನೀಡದ ಹೊರತು ವಿಶ್ವವಿದ್ಯಾಲಯ ಮಂಜೂರು ಮಾಡಿರುವ ಮುಂದುವರಿಕೆ ಸಂಯೋಜನೆ ಮತ್ತು ಎನ್.ಸಿ.ಟಿ.ಇ ಮಂಜೂರು ಮಾಡಿರುವ ಮಾನ್ಯತೆ ರಹಿತವಾಗಿ ವಿದ್ಯಾರ್ಥಿಗಳ ಪ್ರವೇಶ ಪಡೆಯುವುದು, ಕರ್ನಾಟಕ ಮಾನ್ಯತೆ ರಹಿತ ಮತ್ತು ಅಸಂಯೋಜಿತ ಶಿಕ್ಷಣ ಸಂಸ್ಥೆಗಳಿಗೆ ವಿದ್ಯಾರ್ಥಿಗಳ ಪ್ರವೇಶ ನಿಷೇಧ ಅಧಿನಿಯಮ 1992ರ 3ನೇ ಪ್ರಕರಣದ ಉಲ್ಲಂಘನೆಯಾಗಿದ್ದು ಮೊಕದ್ದಮೆ ಹೂಡಲು ಅರ್ಹವಾಗಿಯತ್ತದೆ.
11. ನಿಗಧಿತ ವಿದ್ಯಾರ್ಥಿ ಪ್ರಮಾಣಕ್ಕಿಂತ ಹೆಚ್ಚುವರಿಯಾಗಿ ವಿದ್ಯಾರ್ಥಿಗಳ ಪ್ರವೇಶ ಪಡೆಯುವುದು ಕೆ.ಎಸ್.ಯು ಅಧಿನಿಯಮ 2000ದ 60ನೇ ಪ್ರಕರಣದ ಉಲ್ಲಂಘನೆಯಲ್ಲದೇ ಮೇಲ್ಕಂಡ 1992ರ ಅಧಿನಿಯಮ 4ನೇ ಪ್ರಕರಣದ ಉಲ್ಲಂಘನೆ ಸಹ ಆಗಿದ್ದು, ಮೊಕದ್ದಮೆ ಹೂಡಲು ಅರ್ಹವಾಗುವುದಲ್ಲದೇ ಸಂಯೋಜನೆ ಹಿಂತೆಗೆದುಕೊಳ್ಳಲು ಕಾರಣವಾಗುತ್ತದೆ.
12. ಸ್ಥಳೀಯ ವಿಚಾರಣಾ ಸಮಿತಿಯು ನಮೂದಿಸಿರುವ ಷರತ್ತುಗಳನ್ನು ಕಟ್ಟು-ನಿಟ್ಟಾಗಿ ಪಾಲಿಸತಕ್ಕದ್ದು.
13. ಆಡಳಿತ ವ್ಯವಹಾರದಲ್ಲಿ ಕನ್ನಡವನ್ನು ಕಡ್ಡಾಯವಾಗಿ ಬಳಸತಕ್ಕದ್ದು.
14. ವಿಶ್ವವಿದ್ಯಾಲಯವು, ಕಾಲೇಜಿನ ವಿದ್ಯಾರ್ಥಿಗಳು, ಬೋಧಕರು ಹಾಗೂ ಬೋಧಕೇತರ ನೌಕರರ ಬಗ್ಗೆ ಕಾಲಕಾಲಕ್ಕೆ ಹೊರಡಿಸುವ ನಿಯಮಾವಳಿ/ಪರಿನಿಯಮಾವಳಿ ಮತ್ತು ಆದೇಶಗಳನ್ನು ಕಾಲೇಜು ಪಾಲಿಸತಕ್ಕದ್ದು. ಕಾಲೇಜು, ವಿಶ್ವವಿದ್ಯಾಲಯದ ಸಂಯೋಜನಾ ಅಧಿಸೂಚನೆಗನುಗುಣವಾಗಿ ಕೋರ್ಸುಗಳಿಗೆ ನಿಗಧಿಪಡಿಸಿರುವ ವಿದ್ಯಾರ್ಥಿ ಪ್ರಮಾಣವನ್ನು ಮೀರದಂತೆ ಹಾಗೂ ವಿಶ್ವವಿದ್ಯಾಲಯವು ಕೋರ್ಸುಗಳಿಗೆ ನಿಗಧಿಪಡಿಸಿರುವ ಅರ್ಹತಾ ನಿಯಮಾವಳಿಗಳನ್ನು ಉಲ್ಲಂಘಿಸದಂತೆ ಕೋರ್ಸುಗಳಿಗೆ ವಿದ್ಯಾರ್ಥಿಗಳ ಪ್ರವೇಶವನ್ನು ಮಾಡಿಸಿಕೊಳ್ಳತಕ್ಕದ್ದು.
15. ವೈಶಾಕ V/s ರಾಜಸ್ಥಾನದ ರಾಜ್ಯ ಸರ್ಕಾರದ ವ್ಯಾಜ್ಯಕ್ಕೆ ಸಂಬಂಧಿಸಿದಂತೆ, ದಿನಾಂಕ13-8-1997ರ ಸರ್ವೋಚ್ಚ ನ್ಯಾಯಾಲಯದ ತೀರ್ಪಿನಂತೆ, ಕಾಲೇಜು ಅಥವಾ ಕಛೇರಿ, ಕೆಲಸ ನಿರ್ವಹಿಸುವ ಸ್ಥಳಗಳಲ್ಲಿ, ಯಾವುದೇ ವ್ಯಕ್ತಿಯಿಂದ(ಬೋಧಕ/ಬೋಧಕೇತರ/ಆಡಳಿತಮಂಡಳಿ) ಅಥವಾ ವಿದ್ಯಾರ್ಥಿಯಿಂದ ಮಹಿಳೆಯರಿಗೆ/ವಿದ್ಯಾರ್ಥಿನಿಯರಿಗೆ ಯಾವುದೇ ರೀತಿಯ ಕಿರುಕುಳ, ಲೈಂಗಿಕ ಕಿರುಕುಳ ನೀಡುವುದು ಶಿಕ್ಷಾರ್ಹ ಅಪರಾಧವಾಗಿದೆ. ಯಾವುದೇ ವ್ಯಕ್ತಿ/ವಿದ್ಯಾರ್ಥಿ ಈ ರೀತಿಯಾದ ಚಟುವಟಿಕೆಗಳಲ್ಲಿ ಭಾಗಿಯಾಗಿದ್ದಲ್ಲಿ ಅಂತಹವರನ್ನು ಕೆಲಸದಿಂದ/ವಿದ್ಯಾರ್ಥಿದೆಸೆಯಿಂದ ವಿಮುಕ್ತಿಗೊಳಿಸಬಹುದಾಗಿದೆ. ಕಾಲೇಜು ಈ ರೀತಿಯ ಅಪರಾದಗಳನ್ನು/ಚಟುವಟಿಕೆಗಳನ್ನು ಮಟ್ಟಹಾಕಲು ಸರ್ವೋಚ್ಚ ನ್ಯಾಯಾಲಯದ ಆದೇಶದಂತೆ ದೂರು ಸಮಿತಿಯನ್ನು ಸ್ಥಾಪನೆ ಮಾಡತಕ್ಕದ್ದು.
16. ವಿದ್ಯಾರ್ಥಿಗಳನ್ನು ಶೈಕ್ಷಣಿಕವಾಗಿ ಅಭಿವೃದ್ಧಿಗೊಳಿಸುವ ಮಟ್ಟಕ್ಕೆ ಕಾಲೇಜು ಕೋರ್ಸುಗಳ ಶಿಕ್ಷಣ ಕ್ರಮವನ್ನು ಉತ್ತಮಪಡಿಸತಕ್ಕದ್ದು. ವಿದ್ಯಾರ್ಥಿಗಳನ್ನು ಹಾಗೂ ಸೇವೆಯಲ್ಲಿರುವ ಬೋಧಕರುಗಳನ್ನು ಪ್ರಾಂಶುಪಾಲರು/ಆಡಳಿತಮಂಡಳಿಯವರು ಸಹಾನುಭೂತಿಯಿಂದ ನೋಡಿಕೊಳ್ಳತಕ್ಕದ್ದು.
17. ಕಾಲೇಜು ವಿದ್ಯಾರ್ಥಿಗಳ ಅಂಕಪಟ್ಟಿ, ಪದವಿ ಪ್ರಮಾಣ ಪತ್ರ ಹಾಗೂ ಇತರೇ ದಾಖಲೆಗಳನ್ನು ಆರು ತಿಂಗಳ ಅವಧಿಯೊಳಗೆ ವಿದ್ಯಾರ್ಥಿಗಳಿಗೆ ನೀಡಬೇಕು.



Scanned with ACE Scanner

18. ವಿದ್ಯಾರ್ಥಿಗಳು, ವರ್ಗಾವಣೆ ಪತ್ರವನ್ನು ನೀಡುವ ಬಗ್ಗೆ ಮನವಿ ಸಲ್ಲಿಸಿದಲ್ಲಿ, ಕಾಲೇಜು ವಿದ್ಯಾರ್ಥಿಗಳಿಗೆ ಯಾವುದೇ ತೊಂದರೆ ನೀಡದೆ, ವರ್ಗಾವಣೆ ಪತ್ರವನ್ನು ನೀಡತಕ್ಕದ್ದು. ಈ ಬಗ್ಗೆ ಆ ವರ್ಷದ/ಸೆಮಿಸ್ಟರ್‌ನ ಪೂರ್ಣವಾಗದ ಅವಧಿಯ ಬೋಧನಾ ಶುಲ್ಕವನ್ನು ಹೊರತುಪಡಿಸಿ, ಯಾವುದೇ ಹೆಚ್ಚುವರಿ ಶುಲ್ಕವನ್ನು ವಸೂಲಿ ಮಾಡಲು ನಿಯಮಾವಳಿ ಪ್ರಕಾರ ಅನುಮತಿ ಇರುವುದಿಲ್ಲ.

19. ಯಾವುದೇ ರೀತಿಯಾದ ಕ್ಯಾಪಿಟೇಷನ್ ಶುಲ್ಕವನ್ನು ಕಾಲೇಜು ವಸೂಲಿ ಮಾಡತಕ್ಕದ್ದಲ್ಲ.

20. 2023-24ನೇ ಸಾಲಿಗೆ ಕೋರ್ಸ್‌ಗಳ ಸಂಯೋಜನಾ ನವೀಕರಣಕ್ಕೆ ಕಾಲೇಜು ತಪ್ಪದೆ ಅರ್ಜಿಯನ್ನು ಸಲ್ಲಿಸತಕ್ಕದ್ದು.

21. ಐದು ವರ್ಷಗಳನ್ನು ಪೂರೈಸಿರುವ ಕಾಲೇಜುಗಳು ನ್ಯಾಕ್(NAAC) ಅನುಮೋದನೆಯನ್ನು ಕೂಡಲೇ ಪಡೆದುಕೊಳ್ಳತಕ್ಕದ್ದು.

22. ಪ್ರಾಂಶುಪಾಲರು, ಮೌಲ್ಯಮಾಪನ ಕಾರ್ಯಕ್ಕಾಗಿ ಅರ್ಹ ಶಿಕ್ಷಕರ ಪಟ್ಟಿಯನ್ನು ಸಂಬಂಧಿಸಿದ ಪರೀಕ್ಷಾ ಮಂಡಳಿಗಳ ಅಧ್ಯಕ್ಷರುಗಳಿಗೆ ತಪ್ಪದೇ ಸಲ್ಲಿಸತಕ್ಕದ್ದು. ಹಾಗೂ ಕಡ್ಡಾಯವಾಗಿ ಮೌಲ್ಯಮಾಪನ ಕಾರ್ಯಕ್ಕೆ ಕಳುಹಿಸತಕ್ಕದ್ದು, ತಪ್ಪಿದ್ದಲ್ಲಿ ಕಾಲೇಜಿನ ಸಂಯೋಜನೆಯನ್ನು ರದ್ದುಪಡಿಸಲಾಗುವುದು.

ಆದೇಶದ ಮೇರೆಗೆ

ಕುಲಸಚಿವರು

ಗೆ,

ಪ್ರಾಂಶುಪಾಲರು,

**Vijaya Teacher's College, 11th Main, 4th Block, Jayanagar, Bengaluru – 11.**

ಪ್ರತಿಗಳು:

1) ಸರ್ಕಾರದ ಪ್ರಧಾನ ಮುಖ್ಯ ಕಾರ್ಯದರ್ಶಿಯವರು, ಶಿಕ್ಷಣ ಇಲಾಖೆ (ಉನ್ನತ ಶಿಕ್ಷಣ), ಬಹುಮಹಡಿಗಳ ಕಟ್ಟಡ, ಡಾ|| ಅಂಬೇಡ್ಕರ್ ವೀಧಿ, ಬೆಂಗಳೂರು-01.
2) ನಿರ್ದೇಶಕರು, ಕಾಲೇಜು ಶಿಕ್ಷಣ ನಿರ್ದೇಶನಾಲಯ, ಬೆಂಗಳೂರು-01.
3) ಕುಲಸಚಿವರು (ಮೌಲ್ಯಮಾಪನ), ಬೆಂಗಳೂರು ನಗರ ವಿಶ್ವವಿದ್ಯಾನಿಲಯ, ಬೆಂಗಳೂರು-01
4) ಕಛೇರಿ ಪ್ರತಿ/ರಕ್ಷಾ ಕಡತ.